ತಂತಿ ವಿಳಾಸ: ಯೂನಿರಿಚ್
ದೂರವಾಣಿ ಸಂಖ್ಯೆ: 2419677/2419361
ಫ್ಯಾಕ್ಸ್: 0821-2419363 / 2419301

e-mail: Registrar@uni-mysore.ac.in
www.uni-mysore.ac.in

# ಮೈಸೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು

ಸಂಖ್ಯೆ: ಎಸಿ4/ 199 /2018-19

ದಿನಾಂಕ:15-04-2019

## ಅಧಿಸೂಚನೆ

**ವಿಷಯ:** 2019-20ನೇ ಶೈಕ್ಷಣಿಕ ಸಾಲಿಗೆ ಸ್ನಾತಕ ಪದವಿ ಕೋರ್ಸುಗಳ ಪ್ರವೇಶಾತಿ ಬಗೆಗೆ.

**ಉಲ್ಲೇಖ:** ಶೈಕ್ಷಣಿಕ ವೇಳಾಪಟ್ಟಿ ಅಧಿಸೂಚನೆ ಸಂಖ್ಯೆ:ಎಸಿ7(ಎ)/456/2016-17, ದಿನಾಂಕ:11-04-2019

*****

2019-20ನೇ ಶೈಕ್ಷಣಿಕ ಸಾಲಿನಲ್ಲಿ ಪ್ರಥಮ, ದ್ವಿತೀಯ ಮತ್ತು ತೃತೀಯ ಬಿ.ಎ./ ಬಿ.ಎಸ್ಸಿ./ ಬಿ.ಸಿ.ಎ./ ಬಿ.ಕಾಂ./ ಬಿ.ಬಿ.ಎ/ಬಿ.ಬಿ.ಎ(ಟೂರಿಸಂ ಆಂಡ್ ಟ್ರಾವಲ್)/ ಬಿ.ಎ(ಫೈನ್‌ಆರ್ಟ್ಸ್)/ ಬಿ.ಬಿ.ಎ.(ಟೂರಿಸಂ & ಹಾಸ್ಪಿಟಾಲಟಿ)/ಬಿ.ಎಸ್.ಡಬ್ಲ್ಯೂ./ಬಿ.ವಿ.ಎ(ಬಿ.ವಿಶ್ಯುಲ್ ಆರ್ಟ್ಸ್- ನಾಲ್ಕು ವರ್ಷ)/ / ಬಿ.ಎ. ಎಸ್ ಎಲ್ ಪಿ, ಒಂದನೇ, ಮೂರನೇ ಮತ್ತು ಐದನೇ ಸೆಮಿಸ್ಟರ್ ಸ್ನಾತಕ ಪದವಿ ಕೋರ್ಸ್‌ಗಳಿಗೆ ಪ್ರವೇಶ ಮಾಡಿಕೊಳ್ಳುವ ದಿನಾಂಕಗಳನ್ನು ಈ ಕೆಳಕಂಡಂತೆ ನಿಗದಿಪಡಿಸಲಾಗಿದೆ.

| | | |
|---|---|---|
| 1 | ಕೊನೆಯ ದಿನಾಂಕ ದಂಡ ಶುಲ್ಕವಿಲ್ಲದೆ | ದಿನಾಂಕ: 01-07-2019 |
| 2 | ರೂ.500/- ದಂಡ ಶುಲ್ಕದೊಂದಿಗೆ | ದಿನಾಂಕ: 08-07-2019 |

ಈ ಅಧಿಸೂಚನೆಯಲ್ಲಿ ನಮೂದಿಸಿರುವ ದಿನಾಂಕಗಳಂದೆ ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರುಗಳು ಆಯಾಯ ಕೋರ್ಸುಗಳಿಗೆ ನಿಯಮಾನುಸಾರ ಪ್ರವೇಶ ಮಾಡಿಕೊಳ್ಳತಕ್ಕದ್ದು.

**ಪ್ರಾಂಶುಪಾಲರುಗಳಿಗೆ /ವಿದ್ಯಾರ್ಥಿಗಳಿಗೆ ಸೂಚನೆಗಳು:**

1. ಪ್ರವೇಶಾತಿ ಕಡೆಯ ದಿನಾಂಕದ ನಂತರ ಪ್ರವೇಶಾತಿಗಳನ್ನು ಮಾಡಿಕೊಳ್ಳುವಂತಿಲ್ಲ.
2. ಸಂಬಂಧಿಸಿದ ಕಾಲೇಜಿನಲ್ಲಿ ನಿಗದಿಪಡಿಸಿದ ಶುಲ್ಕಗಳನ್ನು ಪಾವತಿಸಿ ರಶೀದಿ ಪಡೆಯಬೇಕು.
3. ವಿಶ್ವವಿದ್ಯಾನಿಲಯ ಅಧಿಸೂಚನೆ ಸಂಖ್ಯೆ:R2-588/83-84, ದಿನಾಂಕ:24-11-1987ರ ರೀತ್ಯಾ ಒಬ್ಬ ವಿದ್ಯಾರ್ಥಿ ಏಕ ಕಾಲದಲ್ಲಿ ಎರಡು ಪದವಿ ಕೋರ್ಸುಗಳನ್ನು ವ್ಯಾಸಂಗ ಮಾಡಲು ಅವಕಾಶ ಇರುವುದಿಲ್ಲ.
4. ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಡುವ ಕಾಲೇಜುಗಳಿಂದ **3 ಮತ್ತು 5ನೇ ಸೆಮಿಸ್ಟರ್‌ಗೆ ವರ್ಗಾವಣೆ ಪ್ರವೇಶ** ಬಯಸುವ ಅಭ್ಯರ್ಥಿಗಳನ್ನು ಹಿಂದಿನ ಕಾಲೇಜಿನ ಪ್ರಾಂಶುಪಾಲರ ಅನುಮತಿಯೊಡನೆ ಹಾಗೂ ಇತರೆ ಅರ್ಹತೆಗಳನ್ನು ವಿವರವಾಗಿ ಪರಿಶೀಲಿಸಿದ ಬಳಿಕ ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗಾಗಿ ಆಯಾ ವಿದ್ಯಾರ್ಥಿಗಳು ವ್ಯಾಸಂಗ ಮಾಡಿರುವ ಐಚ್ಛಿಕ ವಿಷಯಗಳಿಗೆ ಮಾತ್ರ (ಲಭ್ಯತೆಯನ್ನು ಪರಿಗಣಿಸಿ, ಸಂಖ್ಯಾಮಿತಿಯೊಳಗೆ) ಕಾಲೇಜಿನ ಪ್ರಾಂಶುಪಾಲರೇ ನಿಯಮಾನುಸಾರ ಪ್ರವೇಶ ಮಾಡಿಕೊಳ್ಳಬಹುದು(ಅಂತಹ ವಿದ್ಯಾರ್ಥಿಯು ಸತತವಾಗಿ ವ್ಯಾಸಂಗ ಮಾಡುತ್ತಿರಬೇಕು ಹಾಗೂ ಒಂದು ವರ್ಷ ವ್ಯಾಸಂಗ ತ್ಯಜಿಸಿದಂತಹ ವಿದ್ಯಾರ್ಥಿಗಳನ್ನು ವಿಶ್ವವಿದ್ಯಾನಿಲಯದ ಅನುಮತಿ ಪತ್ರವಿಲ್ಲದೆ ವರ್ಗಾವಣೆ ಪ್ರವೇಶಾತಿ ಮಾಡಬಾರದೆಂದು

ಕಟ್ಟುನಿಟ್ಟಾಗಿ ತಿಳಿಸಿದೆ). ಅಂತಹ **ಅಭ್ಯರ್ಥಿಗಳ ವಿವರಗಳನ್ನು ನಿಗದಿತ ನಮೂನೆಯಲ್ಲೇ ವಿಶ್ವವಿದ್ಯಾನಿಲಯಕ್ಕೆ ಅನುಮೋದನೆಗೆ ಸಲ್ಲಿಸಬೇಕು(ಇದು ಪ್ರಥಮ ವರ್ಷಕ್ಕೆ ಅನ್ವಯವಾಗುವುದಿಲ್ಲ). ಯಾವುದೇ ಕಾರಣಕ್ಕೂ 4 ಮತ್ತು 6ನೇ ಸೆಮಿಸ್ಟರ್ ವಿದ್ಯಾರ್ಥಿಗಳನ್ನು ಒಂದು ಕಾಲೇಜಿನಿಂದ ಮತ್ತೊಂದು ಕಾಲೇಜಿಗೆ ವರ್ಗಾವಣೆ ಪ್ರವೇಶ ಮಾಡಿಕೊಳ್ಳುವಂತಿಲ್ಲ.**

5. ಹೊರ ವಿಶ್ವವಿದ್ಯಾನಿಲಯದ ವರ್ಗಾವಣೆ ಪ್ರವೇಶ ಬಯಸುವ(**3 ಮತ್ತು 5ನೇ ಸೆಮಿಸ್ಟರ್**) ವಿದ್ಯಾರ್ಥಿಗಳ ಪ್ರವೇಶಾತಿಗಳನ್ನು, **ಕಡ್ಡಾಯವಾಗಿ ವಿಶ್ವವಿದ್ಯಾನಿಲಯದ ಪೂರ್ವಾನುಮತಿಯನ್ನು ಪಡೆದ ನಂತರವೇ ಪ್ರವೇಶ ಮಾಡಿಕೊಳ್ಳಬೇಕು(ಈ ನಿಯಮವನ್ನು ಸ್ವಾಯತ್ತ ಕಾಲೇಜುಗಳು ಸಹ ಅನುಸರಿಸಬೇಕು)** ಹಾಗೂ **ಭಾಷಾ/ಐಚ್ಛಿಕ ವಿಷಯ ಬದಲಾವಣೆಗೆ ಅವಕಾಶವಿರುವುದಿಲ್ಲ** (ವಿಶ್ವವಿದ್ಯಾನಿಲಯದಿಂದ ವಿತರಿಸಿರುವ ಅನುಮತಿ ಪತ್ರವನ್ನು ಕಡ್ಡಾಯವಾಗಿ ಪ್ರವೇಶಾತಿ ಅನುಮೋದನೆ ಸಮಯದಲ್ಲಿ ಲಗತ್ತಿಸಬೇಕು).

6. ಪ್ರಾಂಶುಪಾಲರು ವರ್ಗಾವಣೆ ಪ್ರವೇಶ ಕೋರಿ ಬರುವ ಹಾಗೂ ಹೊರ ರಾಜ್ಯದ ವಿಶ್ವವಿದ್ಯಾನಿಲಯದ ಮನವಿ/ಅರ್ಜಿಗಳನ್ನು ವಿಶ್ವವಿದ್ಯಾನಿಲಯಕ್ಕೆ ರವಾನಿಸುವಾಗ ಸಂಬಂಧಿಸಿದ ಕೋರ್ಸುಗಳ ಆಯಾ ಸೆಮಿಸ್ಟರ್‌ಗಳಲ್ಲಿ ಹೆಚ್ಚುವರಿ ಪತ್ರಿಕೆಗಳನ್ನು ಅಭ್ಯಸಿಸುವ ಬಗ್ಗೆ ಆಯಾ ವಿಶ್ವವಿದ್ಯಾನಿಲಯದ ಪಠ್ಯಕ್ರಮದೊಂದಿಗೆ ಮೈಸೂರು ವಿಶ್ವವಿದ್ಯಾನಿಲಯದ ಪಠ್ಯಕ್ರಮವನ್ನು ಹೋಲಿಸಿ(extra paper to be studied ಎಂಬ ಪ್ರಶ್ನೆ ಇದ್ದಲ್ಲಿ) ಪರಿಶೀಲಿಸಿ, ಸಮರ್ಪಕ ದೃಢೀಕರಣದೊಂದಿಗೆ ಕಳುಹಿಸಬೇಕು.(CBCS Regulation ಪ್ರಕಾರ ವರ್ಗಾವಣೆಗೆ ಬಯಸುವ ಪೂರ್ವದ ವರ್ಷದಲ್ಲಿ ಎಲ್ಲಾ ಪತ್ರಿಕೆಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಮಾತ್ರ ವರ್ಗಾವಣೆಗೆ ಅವಕಾಶ ಇರುತ್ತದೆ.)

7. **ವಿಶ್ವವಿದ್ಯಾನಿಲಯದ ಘಟಕ/ಸಂಯೋಜಿತ/ಸ್ವಾಯತ್ತತೆ ಪಡೆದಿರುವ ಕಾಲೇಜುಗಳಲ್ಲಿ ಪ್ರವೇಶ ಪಡೆಯಲು ಇಚ್ಛಿಸುವ ಕರ್ನಾಟಕ ರಾಜ್ಯದ ಪಿ.ಯು ಬೋರ್ಡ್ ಹೊರತುಪಡಿಸಿ / ಹೊರ ರಾಜ್ಯದ / ವಿದೇಶಿ(Foreign National) ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯದಿಂದ ಅರ್ಹತಾ ಪತ್ರವನ್ನು(Eligibility Certificate) ಪಡೆದು ಕಾಲೇಜಿಗೆ ಸಲ್ಲಿಸಿದ ನಂತರವೇ ಪ್ರವೇಶ ಮಾಡಿಕೊಳ್ಳತಕ್ಕದ್ದು. ಈ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು**(ವಿಶ್ವವಿದ್ಯಾನಿಲಯದಿಂದ ಪಡೆದಿರುವ ಅರ್ಹತಾ ಪತ್ರಗಳನ್ನು ಪ್ರವೇಶ ಅನುಮೋದನಾ ಪಟ್ಟಿಯ ಜೊತೆ ಕಡ್ಡಾಯವಾಗಿ ಲಗತ್ತಿಸುವುದು).

8. **ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ವರ್ಗಾವಣೆ ಪ್ರವೇಶಕ್ಕೆ ಅವಕಾಶವಿರುವುದಿಲ್ಲ** ಹಾಗೂ ವಿಶ್ವವಿದ್ಯಾನಿಲಯಕ್ಕೆ ನಿಗದಿತ ಶುಲ್ಕ ಪಾವತಿಸದೆ / ಪೂರ್ಣ ದಾಖಲೆಗಳನ್ನು ಒದಗಿಸದಿದ್ದರೆ, ಅಂತಹ ವಿದ್ಯಾರ್ಥಿಗಳ ಪ್ರವೇಶಾತಿಯನ್ನು ವಿಶ್ವವಿದ್ಯಾನಿಲಯ ಅನುಮೋದಿಸುವುದಿಲ್ಲ.

9. ಮರು ಪ್ರವೇಶ ಬಯಸುವ ಅರ್ಹ ವಿದ್ಯಾರ್ಥಿಗಳ ಪ್ರವೇಶಗಳನ್ನು ವಿಶ್ವವಿದ್ಯಾನಿಲಯ ಪದವಿ ಕೋರ್ಸಿನ Regulation 15.3ರ (CBCS Regulation 10.2) ಪ್ರಕಾರ, ಒಂದು ವರ್ಷ ವ್ಯಾಸಂಗ ತ್ಯಜಿಸಿದ (Discontinue) **3 ಮತ್ತು 5ನೇ ಸೆಮಿಸ್ಟರ್‌ಗೆ ಮಾತ್ರ**) ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರೇ ನಿಗದಿತ ಶುಲ್ಕದ ಜೊತೆಗೆ ಮರು ಪ್ರವೇಶ ಶುಲ್ಕವನ್ನು ಪಡೆದು ಪ್ರವೇಶಾತಿ ಮಾಡಿಕೊಳ್ಳಬಹುದು ಹಾಗೂ 2, 4 ಮತ್ತು 6ನೇ ಸೆಮಿಸ್ಟರ್‌ಗೆ ಮರು ಪ್ರವೇಶ ಬಯಸುವ ವಿದ್ಯಾರ್ಥಿಗಳು ಪ್ರಾಂಶುಪಾಲರ ಶಿಫಾರಸ್ಸಿನೊಂದಿಗೆ ವಿಶ್ವವಿದ್ಯಾನಿಲಯಕ್ಕೆ ಮನವಿಯನ್ನು ಸಲ್ಲಿಸಿ, ಅನುಮತಿ ಪಡೆದ ನಂತರವಷ್ಟೆ ಪ್ರವೇಶಾತಿ ಮಾಡಿಕೊಳ್ಳುವುದು.

10. ಪ್ರಾಂಶುಪಾಲರು, 2, 4 ಮತ್ತು 6ನೇ ಸೆಮಿಸ್ಟರ್‌ಗಳಿಗೆ ಮರು ಪ್ರವೇಶ ಕೋರಿ ಬರುವ ವಿದ್ಯಾರ್ಥಿಯ ಮನವಿಯೊಂದಿಗೆ ಪೂರ್ಣ ಮಾಹಿತಿಯನ್ನು(**ಯಾವ ಕಾರಣಕ್ಕಾಗಿ ವಿದ್ಯಾರ್ಥಿಯು ಪ್ರವೇಶ ತ್ಯಜಿಸಿರುತ್ತಾರೆ**) ವಿಶ್ವವಿದ್ಯಾನಿಲಯಕ್ಕೆ ತಿಳಿಸಬೇಕು ಹಾಗೂ **ವಿಶ್ವವಿದ್ಯಾನಿಲಯ ನಿಗದಿಪಡಿಸಿರುವ ಪ್ರವೇಶಾತಿ ಅಂತಿಮ ದಿನಾಂಕದೊಳಗೆ ವಿಶ್ವವಿದ್ಯಾನಿಲಯದ ಪೂರ್ವಾನುಮತಿ ಪಡೆದು ಇಂತಹ ವಿದ್ಯಾರ್ಥಿಗಳು ಪ್ರವೇಶಾತಿ ಪಡೆಯಬೇಕು ಮತ್ತು 2, 4 ಮತ್ತು 6ನೇ ಸೆಮಿಸ್ಟರ್**



ಪು.ತಿ.ನೋ.

ತರಗತಿಗಳು ಆರಂಭಗೊಳ್ಳುವಾಗ ತರಗತಿಗಳಿಗೆ ಹಾಜರಾಗುವಂತೆ ಪ್ರಾಂಶುಪಾಲರು ತಮ್ಮ ವತಿಯಿಂದಲೆ ವಿದ್ಯಾರ್ಥಿಗಳಿಗೆ ಸೂಚಿಸಬೇಕು.

11. ಪ್ರಥಮ ವರ್ಷಕ್ಕೆ ಪ್ರವೇಶ ಪಡೆಯಲು ಇಚ್ಛಿಸುವ ವಿದ್ಯಾರ್ಥಿಗಳು ಈ ಕೆಳಕಂಡ ದಾಖಲೆಗಳನ್ನು ಪ್ರವೇಶ ಪಡೆಯುವಂತಹ ಕಾಲೇಜಿಗೆ ಪ್ರವೇಶ ಸಮಯದಲ್ಲಿ ಹಾಜರುಪಡಿಸಬೇಕು.

    ಅ. ದ್ವಿತೀಯ ಪಿ.ಯು.ಸಿ. ಮೂಲ ಅಂಕಪಟ್ಟಿ, ರಾಜ್ಯ/ಕೇಂದ್ರ/ Council of Boards of School Education in India (COBSE) ಇವರಿಂದ **ಮಾನ್ಯತೆ**/ಸದಸ್ಯತ್ವ ಪಡೆದ ಶಾಲೆ/ಸಂಸ್ಥೆಗಳು ನಡೆಸುವ **10+2** ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳ ಮೂಲ ಅಂಕಪಟ್ಟಿ.

12. ವಿವಿಧ ವಿಶೇಷ ಸವಲತ್ತುಗಳ ಅಡಿಯಲ್ಲಿ ಪ್ರವೇಶ ಪಡೆಯುವ ಉದಾ: ಆತ್ಮಹತ್ಯೆ ಮಾಡಿಕೊಂಡಿರುವ ರೈತರ ಮಕ್ಕಳು, ಹೈದ್ರಾಬಾದ್ ಕರ್ನಾಟಕ/ಒಡನಾಡಿ ಸಂಸ್ಥೆ/ Transgender (Third Gender) ಇತ್ಯಾದಿ... ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾನಿಲಯದ ಆದೇಶವನ್ನು ಗಮನಿಸಿ ಪ್ರವೇಶ ನೀಡತಕ್ಕದ್ದು. ಅವಶ್ಯವಿದ್ದಲ್ಲಿ ವಿಶ್ವವಿದ್ಯಾನಿಲಯದಿಂದ ಸ್ಪಷ್ಟೀಕರಣ ಪಡೆದ ನಂತರ ಪ್ರವೇಶಕ್ಕೆ ಪರಿಗಣಿಸುವುದು.

13. ಭಾರತ ಸರ್ಕಾರ/ ಕರ್ನಾಟಕ ಸರ್ಕಾರದಿಂದ ವಿದ್ಯಾರ್ಥಿ ವೇತನ ಮಂಜೂರಾತಿಗೆ ಅರ್ಹವಿರುವ ಕಾಲೇಜುಗಳು, ವಿದ್ಯಾರ್ಥಿಗಳ ತಂದೆ,ತಾಯಿ/ಪೋಷಕರ ವಾರ್ಷಿಕ ವರಮಾನ 2.5 ಲಕ್ಷಕ್ಕಿಂತ ಕಡಿಮೆ ಇದ್ದಲ್ಲಿ, ಅಂತಹ SC/ST ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿ ನೀಡುವುದು. ಶುಲ್ಕ ವಿನಾಯಿತಿ ಪಡೆದ ವಿದ್ಯಾರ್ಥಿಗಳು ಕಡ್ಡಾಯವಾಗಿ ವಿದ್ಯಾರ್ಥಿ ವೇತನಕ್ಕೆ ನಿಗಧಿತ ಸಮಯದಲ್ಲಿ ಸಂಬಂಧಿಸಿದ ಇಲಾಖೆಗೆ ಅರ್ಜಿ ಸಲ್ಲಿಸಿರಬೇಕು ಮತ್ತು ಪ್ರಾಂಶುಪಾಲರು ಸಹ ಅರ್ಜಿ ಸಲ್ಲಿಸಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳಬೇಕು. ವಿದ್ಯಾರ್ಥಿ ವೇತನ ಮಂಜೂರಾಗದಂತಹ ಅಥವಾ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸದಂತಹ ವಿದ್ಯಾರ್ಥಿಗಳಿಂದ ಪೂರ್ಣ ಪ್ರವೇಶ ಶುಲ್ಕವನ್ನು ಪಾವತಿಸಿಕೊಳ್ಳಬೇಕು.

14. ಸರ್ಕಾರದ ಆದೇಶ ಸಂಖ್ಯೆ:ಹಿಂವಕ/589/ಬಿಎಂಎಸ್2013, ಬೆಂಗಳೂರು, ದಿನಾಂಕ: 05-10-2013 ಮತ್ತು 06-08-2014ರ ಪ್ರಕಾರ ಹಿಂದುಳಿದ ವರ್ಗಗಳ ಪ್ರವರ್ಗ-1ರ ವಿದ್ಯಾರ್ಥಿಗಳ ತಂದೆ,ತಾಯಿ/ಪೋಷಕರ ವಾರ್ಷಿಕ ವರಮಾನ 2.5 ಲಕ್ಷ ಇತರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ತಂದೆ,ತಾಯಿ/ಪೋಷಕರ ವಾರ್ಷಿಕ ವರಮಾನ 1.00 ಲಕ್ಷವಿರುವ ವಿದ್ಯಾರ್ಥಿಗಳಿಗೆ ಬೋಧನ ಶುಲ್ಕ, ಪರೀಕ್ಷಾ ಶುಲ್ಕ, ಪ್ರಯೋಗಾಲಯ ಶುಲ್ಕ, ಕ್ರೀಡಾ ಶುಲ್ಕ, ಗ್ರಂಥಾಲಯ ಶುಲ್ಕಗಳಿಂದ ವಿನಾಯಿತಿ ನೀಡಬೇಕು. ಈ ರೀತಿ ಶುಲ್ಕ ವಿನಾಯಿತಿ ಪಡೆದ ವಿದ್ಯಾರ್ಥಿಗಳು ಕಡ್ಡಾಯವಾಗಿ ವಿದ್ಯಾರ್ಥಿ ವೇತನಕ್ಕೆ ನಿಗಧಿತ ಸಮಯದಲ್ಲಿ ಸಂಬಂಧಿಸಿದ ಇಲಾಖೆಗೆ ಅರ್ಜಿ ಸಲ್ಲಿಸಿರಬೇಕು ಮತ್ತು ಪ್ರಾಂಶುಪಾಲರು ಸಹ ಅರ್ಜಿ ಸಲ್ಲಿಸಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳಬೇಕು. ವಿದ್ಯಾರ್ಥಿ ವೇತನ ಮಂಜೂರಾಗದಂತಹ ಅಥವಾ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸದಂತಹ ವಿದ್ಯಾರ್ಥಿಗಳಿಂದ ವಿನಾಯಿತಿ ನೀಡಿದ ಶುಲ್ಕವನ್ನು ಪಾವತಿಸಿಕೊಳ್ಳಬೇಕು.

15. ಸರ್ಕಾರ ಆದೇಶ ಸಂಖ್ಯೆ: ಸಕಇ 178 ಪಕವಿ 2015, ಬೆಂಗಳೂರು ದಿನಾಂಕ: 31-12-2015 ಪ್ರಕಾರ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿನ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ನಿಗಧಿಪಡಿಸಿರುವ ಒಟ್ಟು ಶುಲ್ಕದಲ್ಲಿ ಕುಟುಂಬದ ವಾರ್ಷಿಕ ವರಮಾನ ರೂ 2.50 ಲಕ್ಷದಿಂದ 10.00 ಲಕ್ಷಗಳ ಮಿತಿಯೊಳಗೆ ಬರುವ ವಿದ್ಯಾರ್ಥಿಗಳಿಗೆ ಶೇಕಡ 50% ಶುಲ್ಕವನ್ನು ಮರುಪಾವತಿಸಲಾಗುವುದು. ಈ ರೀತಿ ಶುಲ್ಕ ವಿನಾಯಿತಿ ಪಡೆದ ವಿದ್ಯಾರ್ಥಿಗಳು ಕಡ್ಡಾಯವಾಗಿ ವಿದ್ಯಾರ್ಥಿ ವೇತನಕ್ಕೆ ನಿಗಧಿತ ಸಮಯದಲ್ಲಿ ಸಂಬಂಧಿಸಿದ ಇಲಾಖೆಗೆ ಅರ್ಜಿ ಸಲ್ಲಿಸಿರಬೇಕು ಮತ್ತು ಪ್ರಾಂಶುಪಾಲರು ಸಹ ಅರ್ಜಿ ಸಲ್ಲಿಸಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳಬೇಕು. ವಿದ್ಯಾರ್ಥಿ ವೇತನ ಮಂಜೂರಾಗದಂತಹ ಅಥವಾ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸದಂತಹ ವಿದ್ಯಾರ್ಥಿಗಳಿಂದ ವಿನಾಯಿತಿ ನೀಡಿದ ಶುಲ್ಕವನ್ನು ಪಾವತಿಸಿಕೊಳ್ಳಬೇಕು.

16. ಸರ್ಕಾರದಿಂದ ಅನುದಾನ ಪಡೆಯುವ ಕಾಲೇಜುಗಳು, ಸರ್ಕಾರ ಮತ್ತು ವಿಶ್ವವಿದ್ಯಾನಿಲಯ ಆಯಾ ಕೋರ್ಸುಗಳಿಗೆ ನಿಗಧಿಪಡಿಸಿರುವ ಶುಲ್ಕಗಳನ್ನು ಮಾತ್ರ ಪಾವತಿಸಿಕೊಳ್ಳಬೇಕು. ಹೆಚ್ಚು ಶುಲ್ಕ ಪಡೆಯುವಂತಿಲ್ಲ, ಒಂದು ಪಕ್ಷ ಹೆಚ್ಚು ಶುಲ್ಕ ಸಂದಾಯ ಮಾಡಿಕೊಂಡಲ್ಲಿ ಅಂತಹ ಕಾಲೇಜುಗಳ ಮೇಲೆ ಶಿಸ್ತು ಕ್ರಮ ಜರುಗಿಸ ಬೇಕಾಗುತ್ತದೆ.

17. UGC ಪತ್ರ ಸಂಖ್ಯೆ:F.1-15/2015(ARC) ದಿನಾಂಕ: 18-03-2016ರ ರೀತ್ಯಾ ವಿಶ್ವವಿದ್ಯಾನಿಲಯ ಸಂಯೋಜಿತ ಎಲ್ಲಾ ಪದವಿ ಕಾಲೇಜುಗಳಲ್ಲಿ Anti-Ragging ಘಟಕವನ್ನು ಸ್ಥಾಪಿಸಿರಬೇಕು, ವಿದ್ಯಾರ್ಥಿಗಳು ಯಾವುದೇ ರೀತಿಯಲ್ಲಿ Raggingಗೆ ಒಳಗಾಗದಂತೆ(ಪ್ರಾಂಶುಪಾಲರು/ಮುಖ್ಯಸ್ಥರು ಸಮಿತಿ ವತಿಯಿಂದ) ಎಚ್ಚರವಹಿಸುವುದು.

**ವಿಶೇಷ ಸೂಚನೆ:**

1. ಪ್ರವೇಶಾತಿಯ ಕಡೆಯ ದಿನಾಂಕಗಳು ಮುಗಿದ ನಂತರ, ಯಾವುದೇ ವಿದ್ಯಾರ್ಥಿಗಳ ಮನವಿಗಳನ್ನು ವಿಶ್ವವಿದ್ಯಾನಿಲಯಕ್ಕೆ ರವಾನೆ(Forward) ಮಾಡಬಾರದಾಗಿ ಈ ಮೂಲಕ ಕಾಲೇಜುಗಳ ಎಲ್ಲಾ ಪ್ರಾಂಶುಪಾಲರುಗಳಿಗೆ ತಿಳಿಯಪಡಿಸಿದೆ. ಪ್ರವೇಶ ಪ್ರಕ್ರಿಯೆಗಳನ್ನು ಕಡೆಯ ದಿನಾಂಕದೊಳಗೆ ಕಡ್ಡಾಯವಾಗಿ ಪೂರ್ಣಗೊಳಿಸಬೇಕು.
2. ಹಳೇ ವಿದ್ಯಾರ್ಥಿಗಳಿಗೆ ಮರು ಪ್ರವೇಶ ನೀಡುವ ಮುನ್ನ Regulation ಗೆ ಅನುಗುಣವಾಗಿ ವಿಶ್ವವಿದ್ಯಾನಿಲಯದ ಅನುಮತಿ ಪಡೆಯುವುದು ಕಡ್ಡಾಯ, ಒಂದು ಪಕ್ಷ ವಿಶ್ವವಿದ್ಯಾನಿಲಯದ ಅನುಮತಿ ಪಡೆಯದೇ ಪ್ರವೇಶ ಮಾಡಿದ ಪಕ್ಷದಲ್ಲಿ, ಮುಂದಿನ ಎಲ್ಲಾ Litigationಗಳಿಗೆ ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರು ನೇರ ಹೊಣೆಗಾರರಾಗುತ್ತಾರೆ ಎಂದು ಸ್ಪಷ್ಟಪಡಿಸಿದೆ.
3. ಪದವಿ ತರಗತಿಗಳ ನಿಯಮವಳಿ ಪ್ರಕಾರ ಪ್ರತಿಯೊಂದು ಸೆಮಿಸ್ಟರ್ ಕೂಡ ವಿದ್ಯಾರ್ಥಿಗಳ ಹಾಜರಾತಿಯನ್ನು ಲೆಕ್ಕಹಾಕುವ ಉದ್ದೇಶಕ್ಕಾಗಿ ಸೆಮಿಸ್ಟರನ್ನು ಒಂದು ಯೂನಿಟ್ ಎಂದು ಪರಿಗಣಿಸುವುದು, (2018–19ನೇ ಶೈಕ್ಷಣಿಕ ಸಾಲಿನಲ್ಲಿ ಪ್ರವೇಶಾತಿ ಪಡೆದ ವಿದ್ಯಾರ್ಥಿಗಳು ಪ್ರತಿ Course/paper ಗೆ ಒಂದು ಯೂನಿಟ್ ಎಂದು ಪರಿಗಣಿಸುವುದು)
4. ವಿದ್ಯಾರ್ಥಿಗಳನ್ನು ಪ್ರವೇಶ ಮಾಡುವ ಸಂದರ್ಭದಲ್ಲಿ ಯಾವುದೆ ಗೊಂದಲ ಉಂಟಾದಲ್ಲಿ ಕಾಲೇಜಿಗೆ ಅಗತ್ಯವಾಗಿ ಬೇಕಾದ ಮಾಹಿತಿಯನ್ನು ವಿಶ್ವವಿದ್ಯಾನಿಲಯದಿಂದ ಪಡೆದ ನಂತರವೇ ಪ್ರವೇಶ ನೀಡುವುದು.
5. ಭಾಷಾ ವಿನಾಯಿತಿ ಕೋರುವ ವಿದ್ಯಾರ್ಥಿಗಳ ಪ್ರಥಮ ವರ್ಷ ಪರೀಕ್ಷೆಗಳು ಪ್ರಾರಂಭವಾಗುವುದಕ್ಕಿಂತ ಮುಂಚಿತವಾಗಿ ಆಗತ್ಯ ದಾಖಲೆಗಳನ್ನು ಸಲ್ಲಿಸಿ ಭಾಷಾ ವಿನಾಯತಿ ಪಡೆಯಲು ತಿಳಿಸಿದೆ. ನಂತರ ಬರುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
6. ಎರಡು ಮತ್ತು ಮೂರನೇ ವರ್ಷಕ್ಕೆ ವಿದ್ಯಾರ್ಥಿಗಳು ಪ್ರವೇಶಾತಿ ಪಡೆದ ನಂತರವೇ ಹಾಜರಾತಿ ಪುಸ್ತಕದಲ್ಲಿ ಹೆಸರು ನಮೂದಿಸುವುದು.

**ಕುಲಸಚಿವ**

Registrar
University of Mysore
Mysore-570 005

ಇವರಿಗೆ:

1. ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಡುವ ಎಲ್ಲಾ ಬಿ.ಎ./ ಬಿ.ಎಸ್ಸಿ./ ಬಿ.ಸಿ.ಎ./ ಬಿ.ಕಾಂ./ ಬಿ.ಬಿ.ಎ/ಬಿ.ಬಿ.ಎ(ಟೂರಿಸಂ ಆಂಡ್ ಟ್ರಾವಲ್)/ ಬಿ.ಎ(ಫೈನ್ಆರ್ಟ್ಸ್)/ ಬಿ.ಬಿ.ಎ.(ಟೂರಿಸಂ & ಹಾಸ್ಪಿಟಾಲಟಿ)/ಬಿ.ಎಸ್.ಡಬ್ಲ್ಯೂ./ಬಿ.ವಿಶ್ಯುಲ್ ಆರ್ಟ್ಸ್.(ನಾಲ್ಕು ವರ್ಷ)/ / ಬಿ.ಎ. ಎಸ್ ಎಲ್ ಪಿ, ಘಟಕ/ಸ್ವಾಯತ್ತ ಹಾಗೂ ಸಂಯೋಜಿತ ಪದವಿ ಕಾಲೇಜುಗಳ **ಪ್ರಾಂಶುಪಾಲರುಗಳಿಗೆ ಸೂಕ್ತ ಕ್ರಮಕ್ಕಾಗಿ.**



ಪು.ತಿ.ನೋ.

2. ಕುಲಸಚಿವರು(ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.- **ಮಾಹಿತಿಗಾಗಿ**
3. ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ/ವಾಣಿಜ್ಯ/ಕಲಾ ಮತ್ತು ಕಾನೂನು ನಿಕಾಯ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ಕುಲಸಚಿವರು, ಬೆಂಗಳೂರು ವಿಶ್ವವಿದ್ಯಾನಿಲಯ, ಜ್ಞಾನಭಾರತಿ, ಬೆಂಗಳೂರು-560 056.
6. ಕುಲಸಚಿವರು, ಕುವೆಂಪು ವಿಶ್ವವಿದ್ಯಾನಿಲಯ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ, ಬಿ.ಆರ್.ಪ್ರಾಜೆಕ್ಟ್, ಶಿವಮೊಗ್ಗ.
7. ಕುಲಸಚಿವರು, ಮಂಗಳೂರು ವಿಶ್ವವಿದ್ಯಾನಿಲಯ, ಕೊಣಜೆ, ಮಂಗಳೂರು-574 199.
8. ಕುಲಸಚಿವರು, ಗುಲಬರ್ಗ ವಿಶ್ವವಿದ್ಯಾನಿಲಯ, ಗುಲಬರ್ಗ-585 106.
9. ಕುಲಸಚಿವರು, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ-580 003.
10. ಕುಲಸಚಿವರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು-572 101.
11. ಕುಲಸಚಿವರು, ಮಹಿಳಾ ವಿಶ್ವವಿದ್ಯಾನಿಲಯ, ಬಾಗಲಕೋಟೆ, ಬಿಜಾಪುರ.
12. ಕುಲಸಚಿವರು, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ಬಳ್ಳಾರಿ.
13. ಕುಲಸಚಿವರು, ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯ, 4ನೇ ಬ್ಲಾಕ್, ಜಯನಗರ, ಬೆಂಗಳೂರು.
14. ಕುಲಸಚಿವರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ, ಬೆಳಗಾಂ.
15. ಕುಲಸಚಿವರು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ. ಮೈಸೂರು-06.
16. ಕುಲಸಚಿವರು, ದಾವಣಗೆರೆ ವಿಶ್ವವಿದ್ಯಾನಿಲಯ, ದಾವಣಗೆರೆ.
17. ಕುಲಸಚಿವರು, ಕರ್ನಾಟಕ ರಾಜ್ಯ ಜಾನಪದ ವಿಶ್ವವಿದ್ಯಾನಿಲಯ, ಶಿಗ್ಗಾವಿ ತಾ., ಹಾವೇರಿ ಜಿಲ್ಲೆ.
18. ಕುಲಸಚಿವರು, ಕರ್ನಾಟಕ ರಾಜ್ಯ ಗಂಗೂಬಾಯಿ ಹಾನಗಲ್ ಸಂಗೀತ ವಿಶ್ವವಿದ್ಯಾನಿಲಯ, ಲಕ್ಷ್ಮೀಪುರಂ, ಮೈಸೂರು.
19. ಕುಲಸಚಿವರು, ರಾಣಿ ಚೆನ್ನಮ್ಮ ವಿಶ್ವವಿದ್ಯಾನಿಲಯ, ವಿದ್ಯಾ ಸಂಗಮ, ಬೆಳಗಾವಿ-591 156.
20. ಕುಲಸಚಿವರು, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾನಿಲಯ, ನವನಗರ,ಹುಬ್ಬಳ್ಳಿ-580 025.
21. ಕುಲಸಚಿವರು, ಸಂಸ್ಕೃತ ವಿಶ್ವವಿದ್ಯಾನಿಲಯ, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-04.
22. ಕುಲಸಚಿವರು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾನಿಲಯ, ಜ್ಞಾನ ಸಾಗರ ಆವರಣ, ವಿನಾಯಕ ನಗರ, ಬಳ್ಳಾರಿ-583 105.
23. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಮೌಲ್ಯ ಭವನ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
24. ನಿರ್ದೇಶಕರು, ಅಂತರಾಷ್ಟೀಯ ಕೇಂದ್ರ, ವಿಶ್ವವಿದ್ಯಾನಿಲಯ ಲಲಿತ ಕಲೆಗಳ ಕಾಲೇಜು ಆವರಣ, ಮಾನಸಗಂಗೋತ್ರಿ, ಮೈಸೂರು.
25. ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನ ವಿಭಾಗ, ಮಾನಸಗಂಗೋತ್ರಿ, ಮೈಸೂರು.
26. ನಿರ್ದೇಶಕರು, ಪಿ.ಎಂ.ಇ.ಬೋರ್ಡ್, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
27. ಪ್ರೊ.ಜಿ.ಹೇಮಂತ್ ಕುಮಾರ್. ಸಂಯೋಜಕರು. ಐಸಿಡಿ, ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾ.ಗಂ., ಮೈಸೂರು.- **ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಬೇಕಾಗಿ ಕೋರಿದೆ.**
28. ಸಂಯೋಜಕರು, ಔಟ್‌ರೀಚ್ & ಆನ್ ಲೈನ್ ಪ್ರೋಗ್ರಾಂ ನಿರ್ದೇಶನಾಲಯ, ಪರಕಾಲ ಮಠ, ಮೈ.ವಿ.ವಿ.ನಿಲಯ, ಮೈಸೂರು-ಸೂಕ್ತ ಕ್ರಮಕ್ಕಾಗಿ.
29. ಆಡಳಿತ/ಪರೀಕ್ಷಾ/ಶೈಕ್ಷಣಿಕ/ ವಿಭಾಗದ ಎಲ್ಲಾ ಉಪಕುಲಸಚಿವ/ಸಹಾಯಕ ಕುಲಸಚಿವ/ಅಧೀಕ್ಷಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
30. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿಗಳು ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
31. ಉಪಕುಲಸಚಿವ/ಅಧೀಕ್ಷಕರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿಶೇಷ ಘಟಕ, ಮಹಾರಾಜ ಕಾಲೇಜು ಶತಮಾನೋತ್ಸವ ಭವನ ಕಟ್ಟಡ, ಮೈವಿವಿ, ಮೈಸೂರು.
32. ಆಡಳಿತ ಶಾಖೆ, ಶೈಕ್ಷಣಿಕ ವಿಭಾಗದ ಎಲ್ಲಾ ವಿಷಯ ನಿರ್ವಾಹಕರುಗಳಿಗೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
33. ಮಾನ್ಯ ಕುಲಪತಿ/ ಕುಲಸಚಿವ/ ಕುಲಸಚಿವ(ಪರೀಕ್ಷಾಂಗ)/ ಹಣಕಾಸು ಅಧಿಕಾರಿಗಳು ಇವರ ಆಪ್ತ ಸಹಾಯಕರುಗಳು, ಮೈವಿವಿ, ಮೈಸೂರು.
34. ಕಛೇರಿ ಪ್ರತಿ.